11.40 ಎಂ.ಪಿ

ಇ) ಅರಣ್ಯ ಇಲಾಖೆಯವರು ಮಲೆನಾಡು ಪ್ರದೇಶದಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡವರಿಗೆ ನೋಟೀಸ್ ನೀಡುತ್ತಿರುವ ಬಗ್ಗೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೆ, ಫಾರೆಸ್ಟ್ ಬಗ್ಗೆ ರಾಜ್ಯದಲ್ಲಿ ತುಂಬಾ ಸಮಸ್ಯೆಯಾಗಿದೆ, ಅದರ ಬಗ್ಗೆ ಚರ್ಚಿಸಲು ತಮಗೆ ಮನವಿಯನ್ನು ಸಲ್ಲಿಸಿದ್ದೆ, ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾವು 10-15 ಜನ ಸದಸ್ಯರು ಬರೆದುಕೊಟ್ಟಿದ್ದೇವೆ. ಅದಕ್ಕಾಗಿ ನಾಗಪ್ಪನವರ ಪ್ರಕರಣದ ಚರ್ಚೆ ಮುಗಿಯುತ್ತಿದ್ದಂತೆಯೇ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತೇನೆ.

ಅಧ್ಯಕ್ಷರು :- ಮಂತ್ರಿಗಳ ಹತ್ತಿರ ವಿರೋಧ ಪಕ್ಷದ ನಾಯಕರ ಹತ್ತಿರ ಮಾತನಾಡಿ ನೋಡೋಣ. I know that Supreme Court judgement on forest land ಆ ಬಗ್ಗೆ ತಾವು ಚಂದ್ರೇಗೌಡರ ಹತ್ತಿರ ಮಾತನಾಡಿ.

ಶ್ರೀ ಕರಿಯಣ್ಣ :- ನಾವು ಮಾತನಾಡಿದ್ದೇವೆ. ಬಿಸಿನೆಸ್ ಕಮಿಟಿಯಲ್ಲೂ ಮಾತನಾಡಿದ್ದೇವೆ. ಅದಕ್ಕೆ ವಿರೋಧಪಕ್ಷದ ನಾಯಕರು ಸಹ ಒಪ್ಪಿಕೊಂಡಿದಾರೆ. ಹೌದು, ಅದು ಒಳ್ಳೆಯ ವಿಚಾರ, ಇಡೀ ರಾಜ್ಯಾದಾದ್ಯಂತ ಪ್ರಶ್ನೆ ಇದೆ, ಅದರ ಬಗ್ಗೆ ಲೋಕಸಭೆಯಲ್ಲೂ ಚರ್ಚೆಯಾಗಿದೆ. ರಾಜ್ಯದಿಂದ ವರದಿ ಬಂದಿದ್ದನ್ನು ನಾವು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗಾಗಲೇ ಅರಣ್ಯ ಇಲಾಖೆಯವರು ಅವರಿಗೆಲ್ಲಾ:ಎವಿಕ್ಷನ್‌ಗಾಗಿ ನೋಟೀಸ್ ಕೊಡುತ್ತಿದ್ದಾರೆ,ಎಲ್ಲಾ ಕಡೆ ಸ್ವಲ್ಪ ಅಶಾಂತಿ ಶುರುವಾಗಿದೆ. ಅದಕ್ಕೆ ಅವಕಾಶ ಕೊಡದಿದ್ದರೆ. ನಾವು ಕ್ಷೇತ್ರಗಳಿಗೆ ಹೋಗುವುದು ಕಷ್ಟವಾಗುತ್ತದೆ. ನಮ್ಮಮಲೆನಾಡು ಪ್ರದೇಶದವರಿಗೆ ತುಂಬಾ ತೊಂದರೆಯಾಗಿದೆ, ನಮ್ಮದೆಲ್ಲಾ ಫಾರೆಸ್ಟ್ ವ್ಯಾಪ್ತಿಯಲ್ಲೇ ಬರುತ್ತದೆ.

ಅಧ್ಯಕ್ಷರು :- ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಕರಿಯಣ್ಣ :- ಆಗಬಹುದು.

ಈ) ಬೆಂಗಳೂರಿನಲ್ಲಿ ಬಿ.ಎಂ.ಟಿ.ಸಿ ಬಸ್‌ಗಳನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸದೇ ಇರುವ ಬಗ್ಗೆ

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಕನಕಪುರದ ಹತ್ತಿರ ಇಬ್ಬರು ಇಂಜಿನಿಯರ್ ಹುಡುಗರು ಲಾರಿ ಸಿಕ್ಕಿ ನಿಧನವನ್ನು ಹೊಂದಿದ್ದಾರೆ. ಕಾರಣವೇನೆಂದರೆ, ಬಿಎಂಟಿಸಿ ಬಸ್ಸಿನವರು ಏನು ಇದ್ದಾರೆ, ಅವರು ಅಲ್ಲಿ ಬಸ್ ನಿಲಿಸಬೇಕಾದ್ದನ್ನು ನಿಲ್ಲಿಸದೆ ಮುಂದಕ್ಕೆ ಹೋಗಿ ನಿಲ್ಲಿಸುತ್ತಾರೆ. ವಿದ್ಯಾರ್ಥಿಗಳು ಬರೀ ಪಾಸಿನವರು ಇರುತ್ತಾರೆನ್ನುವಂತಹ ಉದ್ದೇಶದಿಂದ ಅಲ್ಲಿ ಬಸ್ ನಿಲ್ಲಿಸದೆ ಮುಂದಕ್ಕೆ ಹೋಗಿಬಿಡುವುದರಿಂದ ಈ ರೀತಿಯ ಅನಾಹುತಗಳು ಆಗುತ್ತವೆ. ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಮಾನ್ಯ ಕೃಷ್ಣಮೂರ್ತಿಯವರೆ, ನಾನು ತಮಗೆ ಹೇಳಿದ್ದೆ, ಅವರು 12-30ಕ್ಕೆ ದೆಹಲಿಗೆ ಹೋಗುತ್ತಿದ್ದಾರೆ. ಆ ಮೇಲೆ ನೋಡೋಣ

6) ನಿಯಮ - 69ರ ಮೇರೆಗೆ

ಅ) ವಿಷಯ: ಮಾಜಿ ಸಚಿವರಾದ ಶ್ರೀ ಹೆಚ್. ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ.